**ನಮೀಬಿಯಾ ಸಂಸತ್ತನ್ನು ಉದ್ದೇಶಿಸಿ ಪ್ರಧಾನಮಂತ್ರಿ ಭಾಷಣ (ಜುಲೈ 09, 2025)**

ಜುಲೈ 09, 2025

ರಾಷ್ಟ್ರೀಯ ಅಸೆಂಬ್ಲಿಯ ಸ್ಪೀಕರ್ ಗೌರವಾನ್ವಿತ ಸಾರಾ ಕುಗೊಂಗೆಲ್ವಾ ಅವರ ಆಹ್ವಾನದ ಮೇರೆಗೆ, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಇಂದು ನಮೀಬಿಯಾದ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದರು. ನಮೀಬಿಯಾದ ಕಡೆಯಿಂದ ವ್ಯಕ್ತವಾದ ಈ ವಿಶೇಷ ನಡೆಯು ನಮೀಬಿಯಾಕ್ಕೆ ಪ್ರಧಾನಮಂತ್ರಿಯವರ ಅಧಿಕೃತ ಭೇಟಿಯನ್ನು ಇನ್ನಷ್ಟು ಅರ್ಥಪೂರ್ಣಗೊಳಿಸಿತು.

2. ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿಯವರು "ಪ್ರಜಾಪ್ರಭುತ್ವದ ತಾಯಿ" ಮತ್ತು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವದಿಂದ ನಮೀಬಿಯಾದ ಸದನದ ಸದಸ್ಯರಿಗೆ ಮತ್ತು ಅಲ್ಲಿನ ಸ್ನೇಹಪ್ರವೃತ್ತಿಯ ಜನರಿಗೆ ಶುಭಾಶಯಗಳನ್ನು ತಿಳಿಸಿದರು. ಎರಡು ದೇಶಗಳ ನಡುವಿನ ಐತಿಹಾಸಿಕ ಸಂಬಂಧಗಳನ್ನು ಮತ್ತು ಸ್ವಾತಂತ್ರ್ಯಕ್ಕಾಗಿ ನಮ್ಮ ಹಂಚಿಕೆಯ ಹೋರಾಟವನ್ನು ನೆನಪಿಸಿಕೊಂಡ ಪ್ರಧಾನಮಂತ್ರಿ, ನಮೀಬಿಯಾದ ಸ್ಥಾಪಕ ಪಿತಾಮಹ ಡಾ. ಸ್ಯಾಮ್ ನುಜೋಮಾ ಅವರ ಪರಂಪರೆಗೆ ಗೌರವ ವ್ಯಕ್ತಪಡಿಸಿದರು. ಎರಡೂ ದೇಶಗಳ ಸ್ಥಾಪಕ ಪಿತಾಮಹರು ಪ್ರತಿಪಾದಿಸಿದ ಪ್ರಜಾಪ್ರಭುತ್ವ ಮೌಲ್ಯಗಳು ಮತ್ತು ಆದರ್ಶಗಳು ಎರಡೂ ದೇಶಗಳಲ್ಲಿ ಪ್ರಗತಿಯ ಹಾದಿಯನ್ನು ಇಂದಿಗೂ ಬೆಳಗಿಸುತ್ತಿವೆ ಎಂದು ಅವರು ಹೇಳಿದರು. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಆಳಗೊಳಿಸುವಲ್ಲಿ ನಮೀಬಿಯಾ ಸರ್ಕಾರ ಮತ್ತು ಜನರ ಪಾತ್ರವನ್ನು ಅವರು ಶ್ಲಾಘಿಸಿದರು.

3. ತಮ್ಮ ದೇಶದ ಅತ್ಯುನ್ನತ ರಾಷ್ಟ್ರೀಯ ಗೌರವವನ್ನು ತಮಗೆ ನೀಡಿದ್ದಕ್ಕಾಗಿ ಪ್ರಧಾನಮಂತ್ರಿಗಳು ನಮೀಬಿಯಾದ ಜನರಿಗೆ ಧನ್ಯವಾದ ಸಲ್ಲಿಸಿದರು. ಈ ವಿಶೇಷ ನಡೆಯು ಭಾರತ ಮತ್ತು ನಮೀಬಿಯಾದ ಪ್ರಜಾಪ್ರಭುತ್ವಗಳ ಸಾಧನೆಗಳಿಗೆ ಸಂದ ಗೌರವವಾಗಿದೆ ಎಂದು ಅವರು ಹೇಳಿದರು. ಸ್ವಾತಂತ್ರ್ಯ, ಸಮಾನತೆ ಮತ್ತು ನ್ಯಾಯದ ಕಾವಲುಗಾರರಾಗಿ, ಜಾಗತಿಕ ದಕ್ಷಿಣದ ಒಳಿತಿಗಾಗಿ ಕೆಲಸ ಮಾಡಬೇಕು ಎಂದು ಅವರು ಎರಡೂ ದೇಶಗಳಿಗೆ ಕರೆ ನೀಡಿದರು. ಇದರಿಂದ ಜಾಗತಿಕ ದಕ್ಷಿಣದ ಧ್ವನಿ ಕೇಳುವುದಷ್ಟೇ ಅಲ್ಲ, ಜೊತೆಗೆ ಅವರ ನಂಬಿಕೆಗಳು ಮತ್ತು ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ನನಸಾಗಿಸಲು ಸಾಧ್ಯವಾಗುತ್ತದೆ ಎಂದರು. ಭಾರತದ G-20 ಅಧ್ಯಕ್ಷತೆಯಲ್ಲಿ ಆಫ್ರಿಕನ್ ಒಕ್ಕೂಟವನ್ನು ಗುಂಪಿನ ಶಾಶ್ವತ ಸದಸ್ಯನಾಗಿ ಸೇರಿಸಿಕೊಳ್ಳಲಾಗಿತ್ತು. ಭಾರತವು ಯಾವಾಗಲೂ ಆಫ್ರಿಕಾದ ಪ್ರಗತಿಗಾಗಿ ಕೆಲಸ ಮಾಡುತ್ತದೆ ಎಂದು ಅವರು ಒತ್ತಿ ಹೇಳಿದರು. ಭಾರತವು ತನ್ನ ಅಭಿವೃದ್ಧಿ ಅನುಭವವನ್ನು ಸಂತೋಷದಿಂದ ನಮೀಬಿಯಾ ಮತ್ತು ಖಂಡದ ಇತರ ದೇಶಗಳೊಂದಿಗೆ ಹಂಚಿಕೊಳ್ಳುತ್ತದೆ ಎಂದ ಅವರು, ಸಾಮರ್ಥ್ಯವನ್ನು ನಿರ್ಮಿಸಲು, ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು, ಸ್ಥಳೀಯ ನಾವೀನ್ಯತೆಯನ್ನು ಉತ್ತೇಜಿಸಲು ಮತ್ತು ಆಫ್ರಿಕಾದ ಕಾರ್ಯಸೂಚಿ 2063 ಅನ್ನು ಬೆಂಬಲಿಸಲು ಭಾರತದ ಬದ್ಧತೆಯನ್ನು ವ್ಯಕ್ತಪಡಿಸಿದರು.

4. ತಮಗೆ ನೀಡಿದ ಗೌರವಕ್ಕಾಗಿ ಪ್ರಧಾನಿಯವರು ಸ್ಪೀಕರ್‌ಗೆ ಧನ್ಯವಾದ ಅರ್ಪಿಸಿದರು. ಎರಡು ಪ್ರಜಾಪ್ರಭುತ್ವಗಳು ಸದಾ ಸಮೃದ್ಧಿ ಹೊಂದಲು ಎರಡು ದೇಶಗಳ ನಡುವೆ ಜನರಿಂದ ಜನರ ಮಧ್ಯೆ ಸಂವಹನ ಹೆಚ್ಚಿಸಬೇಕೆಂದು ಅವರು ಕರೆ ನೀಡಿದರು. "ನಮ್ಮ ಮಕ್ಕಳು ನಾವು ಹೋರಾಡಿ ಗಳಿಸಿದ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಲ್ಲದೆ, ನಾವು ಒಟ್ಟಾಗಿ ನಿರ್ಮಿಸುವ ಭವಿಷ್ಯವನ್ನೂ ಸಹ ಪಡೆದುಕೊಳ್ಳಲಿ" ಎಂದು ಹೇಳಿ ಅವರು ತಮ್ಮ ಭಾಷಣವನ್ನು ಮುಗಿಸಿದರು. ಪ್ರಧಾನ ಮಂತ್ರಿಗಳ ಭಾಷಣದ ಪೂರ್ಣ ಪಠ್ಯವನ್ನು ಇಲ್ಲಿ ನೋಡಬಹುದು.

ವಿಂಢೋಕ್

ಜುಲೈ 09, 2025